ನೊ. ಓ.ಕೆ. ಓ.ಕೆ. ಅಟಲೀಸ್ಟ್ ಟೇಕ್ ದಿಸ್ ಗಿಫ್ಟ್'' ಅವಳು ಒಂದು ಸಣ್ಣ ರಟ್ಟಿನ ಬಾಕ್ಸ್ ಕೊಟ್ಟಳು. ಶಾಲಿನಿ ಉತ್ತರಿಸಲಿಲ್ಲ. ಹಗರಣ ಬೇಡವೆನ್ನಿಸಿ ಪ್ರದೀಪ ತೆಗೆದುಕೊಂಡ.

ಬೈಕ್ ಧಾರವಾಡದತ್ತ ತಿರುಗಿತು. ಹಿಂದೆ ಕೂತ ಶಾಲಿನಿ ಬಿಕ್ಕುತ್ತಿದ್ದಳು. ಅಪಮಾನ ಅನ್ನಿಸಿದಾಗೆಲ್ಲ ಇವಳು ಹೀಗೇ. ಅವನ ಬೆನ್ನಿಗೆ ಬೆರಳಿಂದ ಬರೆದಳು – 'ಸಾರಿ ಪ್ರದೀ'. ಹೆಂಡತಿಯ ಈ ಬರಹ ಹೊಸದಲ್ಲ ಅವನಿಗೆ, ಸುಲಭದಲ್ಲಿ ಓದಿದ. ರಸ್ತೆಯಂಚಿಗೆ ಬೈಕ ನಿಲ್ಲಿಸಿದ ನಿಂದೇನು ಮಹಾ ತಪ್ಪಲ್ಲ ಬಿಡೆ. ನಿಂಗೆ ಅಷ್ಟ ಬೇಜಾರಾದ್ರೆ ನಾವೀಗ ಸೋಮೇಶ್ವರಕ್ಕ ಹೋಗ್ವಾ. ಅಲ್ಲೇ ದ್ಯಾವ್ರ ಮುಂದೆ ತಪ್ಪಕಾಯ ಇಡಕ ಬಾ ಶಾಲಿನಿಗೆ ಮನಸ್ಸು ಹಗೂರಾಯಿತು. ''ನೀನಿದನ್ನ ಯಾಕ ತಗೊಂಡೆ?'' ಎಂದಳು. ''ಮನೀಗ ಹೋಗಿ ಕೆಲ್ಸದ ಸಬೀನಾಗೆ ಕೊಟ್ರಾಯ್ತು ಬಾ, ಅದ್ರೆಲ್ಲೇನ ಚಿನ್ನ ಇದ್ರೂ ನಮಗ ಬ್ಯಾಡ. ಸರಿ?'' ಅಂದ. ''ಹಂ, ಇದ್ವರ ಇದ್ವರ ಚಿನ್ನವ, ಅವ್ರ ಹಾಳಾಗ್ಲಿ. ನಂಗೆ ನಂಗೇನಾಯ್ತೇ? ಪುಕ್ಕಟ ಸಿಗ್ತಿದ ಅಂದ ಕೂಡ್ಲೆ ಕೈ ಚಾಚಿದ್ನಲ್ಲ ನಾ...'' ಶಾಲಿನಿ ಮತ್ತೂ ಕಣ್ಣೊರೆಸಿಕೊಂಡಳು. ಬಾ ಮಾರಾಯ್ತಿ. ಪಾಪ, ಅಲ್ಲೀಗ ಬಂದೋರೆಲ್ಲ ನಮ್ಮಂತೋರೆ ಎನ್ನುತ್ತ ಪ್ರದೀಪ ಬೈಕ್ ಸ್ಟಾರ್ಟ್ ಮಾಡಿದ.

ಆ ನೆತ್ತಿ ಸುಡುವ ಬಿಸಲ ರಣದಲ್ಲಿ ಶಾಲಿನಿಗೆ ಅಯಾಚಿತವಾಗಿ ನೆನಪಾಗಿದ್ದು ಆ ಮುದುಕ. ಶಿವರಾತ್ರಿಯ ಚಳಿಯ ದಿನಗಳ ಮುಸ್ಸಂಜೆಯಲ್ಲಿ ಈ ನೆಲದ ಅದ್ಯಾವುದೋ ಮೂಲೆಯಿಂದ ನಮ್ಮನ್ನೇ ಹುಡುಕಿ ಬಂದವನಂತೆ ಬರುವವ. ಅಜ್ಜನ ಮನೆ ಅಂಗಳ ತುಂಬಿ ಚೆಲ್ಲುವಷ್ಟಿದ್ದ ಮಕ್ಕಳ ಮಧ್ಯೆ ಆಸೀನನಾಗಿ ಕಥೆ ಶುರು ಮಾಡಿದನೆಂದರೆ ನಾವೆಲ್ಲ ನಿದ್ದೆಯ ಜೋಶ್‌ಗೆ ಅಲ್ಲೇ ಅವನ ಸುತ್ತೇ ಉರುಳಿರುಳಿ ಬೀಳುತ್ತಿದ್ದೆವೇ ಹೊರತೂ, ಆ ಜಾಗ ಬಿಟ್ಟು ಕದಲುತ್ತಿರಲಿಲ್ಲ. ಅಂಗಳದ ಅಂಚಿನ ಜಗುಲಿಯ ಎತ್ತರದಲ್ಲಿ ಅಜ್ಜನೊಂದಿಗೆ ಮಾತಾಡಲು ಯಾರಾದರೂ ಬಂದಿದ್ದರೆಂದರೆ, ವರ್ಷದ ಒಂದು ರಾತ್ರಿಯ ಕಥೆಯಜ್ಜನೊಂದಿಗೆ ನಾವು ನಿಧಾನ ಅಂಗಳ ಇಳಿದು ಮುಂದೆ ಉದ್ದಾನುದ್ದ ಕಣ್ಣು ಚಾಚುವಷ್ಟು ಹರವಿಕೊಂಡು ಮಲಗಿದ್ದ ತೆಳುಹಳದಿ ರೇವೆಯಂತಹ ಉಸುಕಿನ ಹೆದ್ದಾರಿಗೆ ಜಾರಿಕೊಳ್ಳುತ್ತಿದ್ದೆವು. ಮನೆಯ ಹಿರೀಕರು ಅವರವರ ಗಡಿಬಿಡಿಯಲ್ಲಿದ್ದಾಗ ನಾವು ಅವರ ನದರು ತಪ್ಪಿಸಿ ಇಲ್ಲಿಗೆ ಸರಿದಿದ್ದೇವೆ ಅಂದುಕೊಳ್ಳುತ್ತಿದ್ದುದು ತಪ್ಪೇ ಇದ್ದಿರಬೇಕು. ಮನೆ ತುಂಬಿದ್ದ ಹಿರಿಯರ ಒಂದು ಕಣ್ಣು ನಮ್ಮ ಬೆನ್ನಿಗೆ ಇದ್ದಿರಲಿಕ್ಕೂ ಸಾಕು. ನಮ್ಮ ಕಥೆಯಜ್ಜನಿಗಾಗಿ ಹೇಗೆ ಕಾಯ್ದಿದ್ದೆವು ನಾವು. ಶಿವರಾತ್ರೀಲಿ ಯಾವ ಕಂಪನಿಯ ನಾಟಕ ಬಂದಿದೆ ಅನ್ನೋವಷ್ಟೇ ಆಸ್ಥೆಯಿಂದ, ಉಪವಾಸದ ದಿನಕ್ಕೆ ಎರಡು ರಾತ್ರಿ ಮುಂಚಿನಿಂದಲೂ ಅವನಿಗಾಗಿ ಕಾಯುತ್ತಿದ್ದೆವು. ಮಧ್ಯಾಹ್ನ ಆ ದೊಡ್ಡ ಮನೆ ಜಗುಲಿಯಲ್ಲಿ ನೂರೆಂಟು ಆಸನಗಳಲ್ಲಿ ಉರುಳಾಡುವಾಗಲೂ ನಮ್ಮ ಕಣ್ಣು ದೋಣಿ ದಾಟಿ ಜನ ನಡೆದು ಬರುವ ದಾರಿಯ ಕಡೆಗೇ ಚಾಚಿಕೊಂಡಿರುತ್ತಿತ್ತು. ಆಗ ನಮ್ಮ ಗುಂಪಿನ ಹಿರಿಯರ್‍ಯಾರಾದರೂ ಫರ್ಮಾನು ಹೊರಡಿಸುತ್ತಿದ್ದರು. ''ಇಂದ ಬಂದೇ ಬರುವಾ. ನೋಡಕ್ರಿ'' ಅಹಾ! ಈಗಲೂ ಜೀವ ಚಪ್ಪರಿಸುತ್ತದೆ ಯಾವ ಸಂಬಂಧವೂ ಇಲ್ಲದ ಮುದುಕನಿಗಾಗಿ ನಮ್ಮ ಕಾತರವೇ. ನಮ್ಮೂರು ದಾಟಿ ಗೋಕರ್ಣಕ್ಕೆ ನಡೆದು ಹೋಗುವ ಇಂತಹ ಬಾವಾಜಿಗಳಿಗಾಗಿಯೇ ದೊಡ್ಡ ತಪಲೆಯಲ್ಲಿ ಕಾಯಿಹಾಲು, ನೂರಾರು ಕೊಟ್ಟೆರೊಟ್ಟಿಗಳು ಸಿದ್ಧವಾಗಿರುತ್ತಿದ್ದವು. ಅವರು, ''ಅಮ್ಮಾ'', ಅಂತ ಕರೆದ ಹೊತ್ತಲ್ಲಿ ಅನ್ನ ತೀರಿಹೋಗಿದ್ದರೆ... ಹಾಗಾಗಬಾರದು ಅಂತ ಅಕ್ಕರೆಯಲ್ಲಿ ಸಿದ್ಧವಾಗಿರುತ್ತಿದ್ದ ಪದಾರ್ಥಗಳವು. ಎಷ್ಟೋ ಜನ ತೋಟದ ಬಾವಿಯಲ್ಲಿ ಮಿಂದು, ಜಗುಲಿ ಮೂಲೆಯಲ್ಲಿ ಉಂಡು ಒಂದೆರಡು ಗಳಿಗೆ ಸುಧಾರಿಸಿಕೊಂಡು ಮುಂದೆ ನಡಿಯೋರು. ಕೊಟ್ಟೆರೊಟ್ಟಿಗಳನ್ನು ಬೇಯಿಸಿ ದೊಡ್ಡ ದೊಡ್ಡ ಬೆತ್ತದ ಬುಟ್ಟಿ ತುಂಬಿಸಿ ಬಾಳೆಲೆ ಹೊಚ್ಚಿ ಇಡುತ್ತಿದ್ದರು. ಅಜ್ಜಿ ಯಾವಾಗಲೂ ಹೇಳುವುದು – “ಉಂದ್ ಸತಿಗಾದ್ರೂ ಶಿವರಾತ್ರಿ